ಬೈದುಕೊಳ್ಳತೊಡಗಿದ. ಎತ್ತರವಾಗಿ, ದಢೂತಿಯಾಗಿದ್ದ ಹುಡುಗನೊಬ್ಬ ಸಿಗರೇಟನ್ನು ಆಯುಧದಂತೆ ಸೇದುತ್ತಾ ಸಲೀಮನ ಕಡೆ ಹೆಜ್ಜೆ ಹಾಕಿದ.

"ಸೋ ಯು ಆರ್ ಮಿಸ್ಟರ್ ಸಲೀಮ್ ಸುಂದರ್!"

"ಆಂಫೀಬಿಯನ್‌ನಂತೆ ಆ ಹೆಸರೇನು?"

"ಯಾರು ನೀನು? ನಿನ್ನ ರೂಟ್ಸ್ ಏನು? ನಿನ್ನ ಲಾಯಲ್ಟೀಸ್ ಎತ್ತ?''

ಸಲೀಮನ ಮುಖ ಕೆಂಪಗೆ ಕೆಂಡದಂತೆ ಬದಲಾಯಿತು. ಮಳೆ ಹನಿಗಳು ಕ್ರಮೇಣ ಜೋರಾಗತೊಡಗಿದವು. ಮಳೆಯಲ್ಲೇ ಅಲ್ಲಿಂದ ಹೊರಟು ಹೋಗಬೇಕೆಂಬ ಬಯಕೆಯಾಯಿತು.

ದಢೂತಿ ಹುಡುಗ ಸಲೀಮನ ಪಕ್ಕದಲ್ಲಿ ನಿಂತು ತೀಕ್ಷ್ಣವಾಗಿ ನೋಡತೊಡಗಿದ. ಸಲೀಮನ ದೇಹ ಗಟ್ಟಿಯಾಗತೊಡಗಿತು. ಮುಖದಲ್ಲಿ ಕೋಪ ಸ್ಪಷ್ಟವಾಗಿ ಕಾಣತೊಡಗಿತು.

"ಹಾಗೆ ನೋಡಬೇಡ ಅಜಾರುದ್ದೀನ್!"

"ಇಷ್ಟಕ್ಕೂ ಸುನ್ನಿ ಆಗಿದೆಯಾ?"

"ಅರೆ ಗುರೂ... ಆ ಪಕ್ಕದಲ್ಲಿ ಯುನಿವರ್ಸಿಟಿ ಹೆಲ್ತ್ ಸೆಂಟರ್‌ಗೆ ಕರ್ಕೊಂಡು ಹೋಗಿ ಮಾಡ್ಸೋಣ ಬಾ."

ದೂರದಲ್ಲಿ ರಸ್ತೆಯ ಮೇಲೆ ಹೆಜ್ಜೆಗಳ ಸದ್ದು. ಎಲೆಗಳ ಮೇಲೆ ಮನೋರಮಳ ಮೃದುವಾದ ಹೆಜ್ಜೆಗಳ ಸದ್ದು. ಸಿಟ್ಟನ್ನು ನಿಯಂತ್ರಿಸಬೇಕೆಂದು, ಮಳೆಹನಿಗಳ ಜೊತೆ ಮನೋರಮಳೊಂದಿಗೆ ಬೆಚ್ಚನೆ ಚಹಾ ಸೇವಿಸುವ ಕನಸನ್ನು ನನಸು ಮಾಡಿಕೊಳ್ಳಬೇಕೆಂಬ ಆಶೆ ಗರಿಗೆದರಿತು.

ಸಲೀಮನ ಶರ್ಟ್ ಹಿಡಿದು ಮುಂದಕ್ಕೆ ತಳ್ಳಿದ ಆ ಹುಡುಗ.

'ಫಟ್' ಎಂದು ಅವನ ಮುಖಕ್ಕೆ ಹೊಡೆತ. ಮತ್ತೇನು ಯೋಚಿಸಲಿಲ್ಲ ಸಲೀಮ್. ವಶೀಕರಣಕ್ಕೆ ಒಳಗಾದವನಂತೆ, ಯುದ್ಧ ಮಾಡುತ್ತಿರುವವನಂತೆ, ಎದುರಾಳಿಯ ಮೇಲೆ ಬಿದ್ದು ದಾಳಿ ಮಾಡತೊಡಗಿದ. ಮುಖದ ತುಂಬೆಲ್ಲಾ ರಕ್ತ. ಮೂಳೆ ಕೂಡಾ ಮುರಿದುಹೋಗಿರಬೇಕು.

"ಸಲೀಮ್" ಮನೋರಮಳ ಕೂಗು. ಉಳಿದ ಹುಡುಗರು ಬೆರಗಿನಿಂದ ನೋಡುತ್ತಿದ್ದರು. ಯಾವುದರ ಬಗ್ಗೆ ತಲೆಕೆಡಿಸಿಕೊಳ್ಳಲಿಲ್ಲ ಸಲೀಮ್. ಧಡಲ್ಲನೆ ನೆಲಕ್ಕೊರಗಿದ ಆ ಹುಡುಗ. ಏನು ಮಾಡಬೇಕೆಂದು ತೋಚದೇ, ಹಾಗೆಯೇ ಮರಗಳ ನಡುವೆಯಿಂದ ಕ್ಯಾಂಪಸ್ ಕಡೆ ಓಡಿದ ಸಲೀಮ್. "ಕಡಿಯಿರಿ ಅವನ್ನ. ಚಚ್ಚಾಕಿ..." ನೂರಾರು ಕೇಕೆಗಳು ಅವನನ್ನು ಬೆನ್ನುಹತ್ತಿದಂತೆ ಯಾವುದೋ ಭಯ. ಮಳೆ ಸದ್ದು ಗೊತ್ತಾಗುತ್ತಲೇ ಇತ್ತು. ತೆಳುವಾದ ಪರದೆಯಂಥ ಮಳೆಯಲ್ಲಿ ಹಾಗೆ ಓಡುತ್ತಲೇ ಇದ್ದ ಸಲೀಮ್. "ಸಲೀಮ್ ನಿಲ್ಲು ಸಲೀಮ್" ಮನೋರಮ ಜೋರಾಗಿ ಕೂಗುತ್ತಲೇ ಇದ್ದಳು.

ಮಳೆ ಹನಿಗಳ ನಡುವೆ, ದಟ್ಟ ಪೊದೆಗಳ ನಡುವ ಹಾಗೆಯೇ ತುಂಬಾ ಹೊತ್ತು ಓಡಿದ ಸಲೀಮ್. 'ಈಗ ಏನು ನಡೆಯಲಿದೆ?' ಎಂಬ ಪ್ರಶ್ನೆ ಅವನ ಮನಸ್ಸಿನಲ್ಲಿ ಪದೇ ಪದೇ ಸುಳಿಯತೊಡಗಿತು. 'ಏನೂ ಆಗುವುದಿಲ್ಲ. ಮಹಾ ಎಂದರೆ ಇನ್ನು ನಾಲ್ಕು ಜನ ಹುಡುಗರು ಬರಬಹುದು. ಮತ್ತೊಂದು ಚಿಕ್ಕ ಹೊಡೆದಾಟ' ಉಹುಂ, ಅವನಲ್ಲಿ ತರ್ಕವನ್ನು ಒಪ್ಪಿಕೊಳ್ಳಲಾರದ ಸ್ಥಿತಿ. ಭಯ ಅಲೆಗಳಂತೆ ದೇಹದೊಳಗೆ ಒಂದು ಕಡೆಯಿಂದ ಮತ್ತೊಂದು